# ಪರ್ಯಾಯ ಶೈಕ್ಷಣಿಕ ಯೋಜನೆ 2021–22

**ತರಗತಿ : 8** **ಮಾಹೆ : ಅಕ್ಟೋಬರ್** **ವಿಷಯ : ದ್ವಿತೀಯ ಭಾಷೆ**

| ಕ್ರ.ಸಂ | ತಿಂಗಳು/ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 01 | **ಗಾಂಧೀಜಿಯ ಬಾಲ್ಯ**<br>ಮೊದಲನೇ ವಾರ | * ಐತಿಹಾಸಿಕ ಮತ್ತು ಧಾರ್ಮಿಕ ಮಹಾಪುರುಷರುಗಳ ಬಗ್ಗೆ ಪರಿಚಯಿಸಿಕೊಳ್ಳುವ ಸಾಮರ್ಥ್ಯ ಬೆಳೆಸುವುದು | * ಧಾರ್ಮಿಕ ಮತ್ತು ಐತಿಹಾಸಿಕ ಕಾಲದ ಪ್ರಮುಖ ವ್ಯಕ್ತಿಗಳ ಸಾಧನೆಗಳನ್ನು ಪರಿಚಯಿಸುವುದು | * ಧಾರ್ಮಿಕ ಮತ್ತು ಐತಿಹಾಸಿಕ ಕಾಲದ ಪ್ರಮುಖ ವ್ಯಕ್ತಿಗಳನ್ನು ಪಟ್ಟಿ ಮಾಡುವುದು. |
| | | * ಆಲಿಸುವಿಕೆಯ ಕೌಶಲ ಬೆಳೆಸುತ್ತಾ ಗೊರೂರು ರಾಮಸ್ವಾಮಿ ಅಯ್ಯಂಗಾರ್ ರವರ ಪರಿಚಯಿಸುವುದು | * ಗೊರೂರು ರಾಮಸ್ವಾಮಿ ಅಯ್ಯಂಗಾರ್ ರವರ ಕಾಲ,ಸ್ಥಳ,ಕೃತಿಗಳನ್ನು ವಿಡಿಯೋತೋರಿಸುವ ಮೂಲಕ ಲೇಖಕರನ್ನು ಪರಿಚಯಿಸುವರು.<br>* ಲೇಖಕರ ಪರಿಚಯದ ಆಡಿಯೋ ಕೇಳಿಸುವುದು | * ಲೇಖಕರ ಪರಿಚಯವನ್ನು ವಾಕ್ಯ ರೂಪದಲ್ಲಿ ಬರೆಯುವುದು. |
| | | * ಹೊಸ ಪದಗಳ ಪರಿಚಯ ಕಠಿಣಪದಗಳನ್ನು ಅರ್ಥೈಸುವುದು ಮತ್ತು ಆಯ್ದ ಪದಗಳಿಗೆ ಸ್ವಂತವಾಕ್ಯ ಮಾಡಿಸುವುದು. | * ಶಿಕ್ಷಕರು ಗದ್ಯಭಾಗದಲ್ಲಿ ಬಂದಿರುವ ಕಠಿಣ ಪದಗಳಿಗೆ ಅರ್ಥವನ್ನು ನಿಘಂಟಿನ ಸಹಾಯದಿಂದ ಹುಡುಕಿ ಅರ್ಥವನ್ನು ಅರಿಯುವರು ಮತ್ತು ಆಯ್ದ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸುವಂತೆ ತಿಳಿಸುವುದು. | * ಕಠಿಣ ಪದಗಳ ಚಾರ್ಟ್ |
| | | * ಓದುವಿಕೆ ಮತ್ತು ಆಲಿಸುವಿಕೆ ಕೌಶಲ್ಯ ಬೆಳೆಸುತ್ತಾ ಸರಳ ವಾಕ್ಯಗಳ ರಚನೆಯ ಬಗ್ಗೆ ಅರಿಯುವುದು . | * ಶಿಕ್ಷಕರು ಗದ್ಯಭಾಗವನ್ನು ಸ್ವರಭಾರಯುಕ್ತವಾಗಿ ಓದುವರು ಮತ್ತು ವಿದ್ಯಾರ್ಥಿಗಳಿಗೂ ಓದುವಂತೆ ತಿಳಿಸುವರು; ಜೊತೆಗೆ ಶಿಕ್ಷಕರು ಗದ್ಯಓದುವುದನ್ನುಆಡಿಯೋ ರೆಕಾರ್ಡ್ ಮಾಡಿ ವಿದ್ಯಾರ್ಥಿಗಳಿಗೆ ತಲುಪಿಸುವರು. | * ಗದ್ಯಭಾಗವನ್ನು ತಪ್ಪಿಲ್ಲದಂತೆ ಓದುವುದು.<br><br>* ಅಭ್ಯಾಸ ಹಾಳೆ – 01 |

| | | | | |
|---|---|---|---|---|
| **02** | ಎರಡನೇ ವಾರ | * ಗದ್ಯದ ಪ್ರಮುಖಾಂಶಗಳನ್ನು ತಮ್ಮ ಮಾತುಗಳಲ್ಲಿ ಅಭಿವ್ಯಕ್ತಿಸುವರು . | * ಶಿಕ್ಷಕರು ಗದ್ಯಭಾಗಕ್ಕೆ ಸಂಬಂಧಿಸಿದಂತೆ ಗಾಂಧೀಜಿಯವರ ಬಾಲ್ಯ ಮತ್ತು ಪ್ರೌಢಶಿಕ್ಷಣದ ಬಗ್ಗೆ ವಿವರಿಸುವುದು.<br>* ಮಾನವೀಯ ಮೌಲ್ಯಗಳ ಬಗ್ಗೆ ತಿಳಿಸುವುದು.<br>* ಗಾಂಧೀಜಿಯವರಂತೆ ಶಿಸ್ತು ಮತ್ತು ಸಮಯ ಪಾಲನೆಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುವುದು. | * ಗದ್ಯಭಾಗಕ್ಕೆ ಸಂಬಂಧಿಸಿದ ಸರಳ ಪ್ರಶ್ನೆಗಳನ್ನು ಕೇಳುವುದು . |
| | | * ಪೂರಕ ಸಾಹಿತ್ಯವನ್ನು ಓದುವ ಹವ್ಯಾಸ ಬೆಳೆಸಿಕೊಳ್ಳುವುದು. | * ಗದ್ಯಭಾಗದಲ್ಲಿ ಬಂದಿರುವ ಶ್ರವಣನ ಪಿತೃಭಕ್ತಿ ನಾಟಕ, ಹರಿಶ್ಚಂದ್ರ ನಾಟಕ ಇತರ ಕೃತಿಗಳನ್ನು ಓದುವಂತೆ ಉತ್ತೇಜಿಸುವುದು . | |
| | | | * ಶಿಸ್ತು ಮತ್ತು ಸಮಯ ಪಾಲನೆ ವಿಷಯದ ಚರ್ಚಾಸ್ಪರ್ಧೆ ನಡೆಸುವುದು. | * ಚರ್ಚಾಸ್ಪರ್ಧೆ |
| | | * ವ್ಯಾಕರಣಾಂಶಗಳನ್ನು ಅರ್ಥೈಸಿಕೊಳ್ಳುವರು<br>(ಕನ್ನಡ ಸಂಧಿಗಳು) | * ಕನ್ನಡ ಸಂಧಿಗಳಾದ ಲೋಪ, ಆಗಮ, ಆದೇಶ ಸಂಧಿಗಳನ್ನು ಉದಾಹರಣೆಗಳೊಂದಿಗೆ ವಿವರಿಸುವರು | * ಆಯ್ದ ಪದಗಳನ್ನು ಬಿಡಿಸಿ ಸಂಧಿ ಹೆಸರಿಸುವುದು |
| | | | | ಅಭ್ಯಾಸ ಹಾಳೆ – 02 |

# ಪರ್ಯಾಯ ಶೈಕ್ಷಣಿಕಯೋಜನೆ 2021-22

**ತರಗತಿ : 8** **ಮಾಹೆ : ಅಕ್ಟೋಬರ್** **ವಿಷಯ : ದ್ವಿತೀಯ ಭಾಷೆ**

| ಕ್ರ.ಸಂ | ತಿಂಗಳು/ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| ೦೩ | * **ಜ್ಯೋತಿಯೇ ಆಗು ಜಗಕೆಲ್ಲ**<br><br>ಮೂರನೇ ವಾರ | * ಜಾನಪದ ಸಾಹಿತ್ಯದ ಹಿನ್ನೆಲೆ, ವಿಶೇಷತೆಯನ್ನು ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಳ್ಳುವುದು.<br><br>* ಹೊಸಪದಗಳ ಪರಿಚಯದ ಜೊತೆಗೆ ಗ್ರಾಂಥಿಕ ಪದಗಳ ಅರ್ಥವನ್ನು ಅರ್ಥೈಸಿಕೊಳ್ಳುವುದು .<br><br>* ಜಾನಪದ ಸಾಹಿತ್ಯವನ್ನು ಆಲಿಸಿ ಅರ್ಥೈಸುವ ಸಾಮರ್ಥ್ಯ ಬೆಳೆಸಿಕೊಳ್ಳುವರು.<br><br>* ಪದ್ಯಭಾಗದ ಸಾರಾಂಶವನ್ನು ಆಲಿಸಿ ತಮ್ಮ ಮಾತುಗಳಲ್ಲಿ ಅಭಿವ್ಯಕ್ತಿಸುವ ಸಾಮರ್ಥ್ಯವನ್ನು ಅರಿಯುವರು.<br><br>* ಪದ್ಯದ ಭಾವಾರ್ಥವನ್ನು ಅರ್ಥೈಸಿಕೊಳ್ಳುವುದು . | * ಶಿಕ್ಷಕರು ಕನ್ನಡ ಸಾಹಿತ್ಯದ ಪ್ರಕಾರಗಳಲ್ಲಿ ಒಂದಾದ ಜಾನಪದ ಸಾಹಿತ್ಯದ ರೂಪರೇಷೆಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸುವುದು<br>* ಆಯ್ದ ಜಾನಪದ ಹಾಡುಗಳನ್ನು ಹಾಡುವರು ಮತ್ತು ವಿದ್ಯಾರ್ಥಿಗಳಿಂದ ಹೇಳಿಸುವರು.<br><br>* ಶಿಕ್ಷಕರು ಪದ್ಯಭಾಗಕ್ಕೆ ಸಂಬಂಧಿಸಿದಂತೆ ಕಠಿಣ ಪದಗಳು ಮತ್ತು ಗ್ರಾಂಥಿಕ ಪದಗಳನ್ನು ಕಪ್ಪುಹಲಗೆಯಲ್ಲಿ ಬರೆದು ಪರಿಚಯಿಸುವರು.<br><br>* ಶಿಕ್ಷಕರು ಪದ್ಯವನ್ನು ರಾಗವಾಗಿ ಹಾಡುವರು ಮತ್ತು ವಿದ್ಯಾರ್ಥಿಗಳಿಂದ ಗುಂಪಿನಲ್ಲಿ ಹಾಡಿಸುವರು. ಹಾಡಿನ ಆಡಿಯೋ ರೆಕಾರ್ಡ್ ಮಾಡಿ ವಿದ್ಯಾರ್ಥಿಗಳಿಗೆ ಕೇಳಿಸುವರು.<br><br>* ಶಿಕ್ಷಕರು ಪದ್ಯಭಾಗದಲ್ಲಿ ಬಂದಿರುವ ವಿವಿಧ ಜಾನಪದ ಸಂಗತಿಗಳ ಬಗ್ಗೆ ಸವಿವರವಾಗಿ ವಿದ್ಯಾರ್ಥಿಗಳಿಗೆ ವಿವರಿಸಿ ತಿಳಿಸುವರು.<br><br>* ಮಾತಿನ ಮಹತ್ವದ ಬಗ್ಗೆ, ಸಂಸಾರ ಸಾರದ ಬಗ್ಗೆ, ಸಮಯದ ಮಹತ್ವದ ಬಗ್ಗೆ, ದಾನದ ಮಹತ್ವದ ಬಗ್ಗೆ, ತಾಯಿ ಮತ್ತು ಮಗುವಿನ ಸ್ಥಾನ, ಸಹೋದರರ ಬಾಂಧವ್ಯದ ಬಗ್ಗೆ ಮನೋಜ್ಞವಾಗಿ ಅರ್ಥೈಸುವುದು. | * ಸಾಹಿತ್ಯ ಪ್ರಕಾರಗಳನ್ನು ಪಟ್ಟಿ ಮಾಡಿಸುವುದು.<br><br>* ಕಠಿಣ ಪದಗಳು ಮತ್ತು ಗ್ರಾಂಥಿಕ ಪದಗಳನ್ನು ಬರೆಸುವುದು .<br><br>* ಅಭ್ಯಾಸ ಹಾಳೆ – ೦೩<br><br>* ಒಗಟುಗಳ ಸಂಗ್ರಹ<br><br>* ಪದ್ಯಭಾಗಕ್ಕೆ ಸಂಬಂಧಿಸಿದ ಸರಳ ಪ್ರಶ್ನೆಗಳನ್ನು ಕೇಳುವುದು .<br><br>* ಅಭ್ಯಾಸ ಹಾಳೆ – ೦೪ |

ತರಗತಿ – 8

**ಅಭ್ಯಾಸ ಹಾಳೆ – 1**

**ಗಾಂಧೀಜಿಯ ಬಾಲ್ಯ**

**I. ಈ ಕೆಳಗಿನ ವ್ಯಕ್ತಿಗಳನ್ನು ಗುರುತಿಸಿ:**

 ------------------

 -----------------

 -------------------

 ------------------

 ------------------

 -------------------

 ------------------

 ---------------

**II. ಕೃತಿಕಾರರ ಪರಿಚಯ**

ಹೆಸರು : ಗೊರೂರು ರಾಮಸ್ವಾಮಿ ಅಯ್ಯಂಗಾರ್

ಜನನ : ______________________________

ಸ್ಥಳ : ______________________________

ಕೃತಿಗಳು : ______________________________

______________________________

ಪ್ರಶಸ್ತಿಗಳು : ______________________________

**III. ಈ ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿ ಹೆಸರಿಸಿ**

| | | |
|---|---|---|
| ಮಾತಿಲ್ಲ | ಮಾತು + ಇಲ್ಲ | ಲೋಪಸಂಧಿ |
| ಬೇರೊಬ್ಬ | | |
| ಆಣತಿಯನ್ನು | | |
| ವಿದ್ಯಾಭ್ಯಾಸ | | |
| ವೇಳೆಯಲ್ಲಿ | | |
| ತುದಿಯಿಂದ | | |
| ಬೆಟ್ಟದಾವರೆ | | |
| ನಿನಗಲ್ಲದೆ | | |
| ಪರಿಣಾಮವಾಗಿ | | |
| ಹೂಬುಟ್ಟಿ | | |

**IV. ಕೆಳಗಿನ ಪದಗಳಿಗೆ ತದ್ಭವ ರೂಪ ಬರೆಯಿರಿ**

1. ಅಕ್ಷರ ______________
2. ಪುಸ್ತಕ ______________
3. ನಿತ್ಯ ______________
4. ಜ್ಞಾನ ______________
5. ಮುಖ ______________
6. ಕಾವ್ಯ ______________
7. ಆರ್ಯ ______________
8. ರಾಕ್ಷಸ ______________
9. ಕವಿ ______________
10. ಸಂಸ್ಕೃತ ______________

## ಅಭ್ಯಾಸ ಹಾಳೆ –2

**I.ಒಂದು ವಾಕ್ಯದಲ್ಲಿ ಉತ್ತರಿಸಿ:**

1. ಗಾಂಧೀಜಿಯವರ ಆತ್ಮಕಥೆ ಯಾವುದು ?

______________________________

2. ಗಾಂಧೀಜಿಯವರು ಎಲ್ಲಿ ಯಾವಾಗ ಜನಿಸಿದರು ?

______________________________

3. ಬಾಲ್ಯದಲ್ಲಿ ಗಾಂಧೀಜಿಯವರ ಮೇಲೆ ಪ್ರಭಾವ ಬೀರಿದ ನಾಟಕ ಯಾವುದು ?

______________________________

4. ಪರೀಕ್ಷೆಯಲ್ಲಿ ಗಾಂಧೀಜಿಯವರು ತಪ್ಪಾಗಿ ಬರೆದ ಪದ ಯಾವುದು ?

______________________________

5. ಗಾಂಧೀಜಿಯವರು ಬಾಲ್ಯದಲ್ಲಿ ಓದಿದ ಮೊದಲ ಪುಸ್ತಕ ಯಾವುದು ?

______________________________

**II. ಗಾಂಧೀಜಿಯವರ ತತ್ತ್ವ ಮತ್ತು ಸಿದ್ಧಾಂತಗಳನ್ನು ಬರೆಯಿರಿ:**

**III.** ಆಯ್ದ ರಾಷ್ಟ್ರ ನಾಯಕರ ಬಗ್ಗೆ ಕಿರು ಪ್ರಬಂಧ ಬರೆಯಿರಿ (ನಿಮ್ಮ ಆಯ್ಕೆ)

## ಅಭ್ಯಾಸ ಹಾಳೆ –3

**I. ಹೊಂದಿಸಿ ಬರೆಯಿರಿ :**

| | | | |
|---|---|---|---|
| 1. | ಮದ್ದಿನ | – | ಹಣ |
| 2. | ರೊಕ್ಕ | – | ಶಿವನ ನೆಲೆ |
| 3. | ಅಕ್ಕ | – | ಪ್ರಭು |
| 4. | ಅರಸ | – | ಭಾವ |
| 5. | ಕೈಲಾಸ | – | ಮಧ್ಯಾಹ್ನ |

**II. ಸಮಾನಾರ್ಥಕ ಪದ ಬರೆಯಿರಿ :**

1. ಪ್ರಭು = ______________________________
2. ಕಂದ = ______________________________
3. ಬಂಗಾರ = ______________________________
4. ಅಡವಿ = ______________________________
5. ಜಗ = ______________________________
6. ಸಾಗರ = ______________________________
7. ಹೊತ್ತು = ______________________________
8. ಸಂಸಾರ =______________________________
9. ರೊಕ್ಕ = ______________________________
10. ಜ್ಯೋತಿ = ______________________________

## ಅಭ್ಯಾಸಹಾಳೆ – 4

**I. ಮಾದರಿಯಂತೆ ಒಗಟು ಬಿಡಿಸಿ:**

1. ಬಣ್ಣದ ಸೀರೆ ಹುಟ್ಕೊಂಡು,ಮಣ್ಣಾಗಿ ಕುಂತ್ತಾಳೆ : ಕ್ಯಾರೇಟ್
2. ಅಗ್ಗ ಹಾಸಿದೆ, ಹಸು ಮಲಗಿದೆ : ____________________
3. ಬಿಳಿ ಕುದುರೆ, ಹಸಿರು ಬಾಲ : ____________________
4. ಹಸಿರು ಮರದಲ್ಲಿ, ಮೊಸರು ಚೆಲ್ಲಿದೆ : ________________________
5. ಚಿಕ್ಕ ಮನೆಗೆ ಚಿನ್ನದ ಬೀಗ : ________________________
6. ಅಂಗೈ ಅಗಲ ಗದ್ದೆ,  ಗದ್ದೆಗೆ ನೀರು, ನೀರಿಗೆ ಬೇರು,
   ಬೇರಿಗೆ ಬೆಂಕಿ ನಾನ್ಯಾರು ___________________________

**II. ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ :**

1. ಮಾತು ಬೆಳ್ಳಿ ಮೌನ ಬಂಗಾರ

2. ಹಾಸಿಗೆ ಇದ್ದಷ್ಟು, ಕಾಲು ಚಾಚು